ಸಾರಾಯಿ

೧೯೮೬-೮೭ ಶ್ರೀ ಹೆಚ್.ಇ. ಪಾಂಡುರಂಗ.
೧೯೮೭-೮೮ ಮೆ. ರಂಗನಾಥ ಅಸೋಸಿಯೇಟ್ಸ್.

ಆ) ಹೆಂಡದ ಗುತ್ತಿಗೆ ಹಕ್ಕನ್ನು ೧೯೮೬-೮೭ ಮತ್ತು ೧೯೮೭-೮೮ನೇ ಇಸವಿಗಳಲ್ಲಿ ನ್ಯಾಯಾಲಯದ ಆಜ್ಞೆಯ ಮೇರೆಗೆ ಮರು ಹರಾಜು ಮಾಡಲಾಗಿದೆ. ಮೇಲೆ ನಮೂದಿಸಿರುವ ವರ್ಷಗಳಲ್ಲಿ ಸಾರಾಯಿಯ ಮರು ಹರಾಜನ್ನು ಮಾಡುವುದಿಲ್ಲ.

ಇ) ಹೌದು.

ಈ) ಹೌದು. ಸ್ಪರ್ಧಾತ್ಮಕ ಸವಾಲುಗಳನ್ನು ಏರ್ಪಡಿಸುವ ಮತ್ತು ಸರ್ಕಾರದ ಆದಾಯದ ದೃಷ್ಟಿಯಿಂದ.

ಅಬಕಾರಿ ಆದಾಯದ ಬಗ್ಗೆ

೬೬೨-ಎ. ಶ್ರೀ ಸಿ. ಬೈರೇಗೌಡ (ಕೋಲಾರ ಮಂಗಲ್).—ಮಾನ್ಯ ಆರ್ಥಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೬ ಅಬಕಾರಿ ವರ್ಷದಿಂದ ೧೯೮೮ ಅಬಕಾರಿ ವರ್ಷದ ವರೆವಿಗೂ ಪ್ರತಿ ವರ್ಷ ಬಂದ ಅಬಕಾರಿ ವರಮಾನವೆಷ್ಟು ?

ಆ) ಪ್ರತಿ ವರ್ಷ ಈ ಆದಾಯದ ಶೇ. ಎಷ್ಟು ಹೆಚ್ಚಿಗೆ ಆಗಿದೆ.

ಇ) ಈ ನಿರೀಕ್ಷೆ ಪ್ರಕಾರ ಹೆಚ್ಚಿಗೆ ಆದಾಯ ಬಂದಿದೆಯೆ ?

ಶ್ರೀ ಎಂ. ರಾಜಶೇಖರಮೂರ್ತಿ (ಆರ್ಥಿಕ ಮಂತ್ರಿಗಳು).—

ಅ) ೧) ೧೯೮೬-೮೭ : ೨೩೯.೯೬ ಕೋಟಿ ರೂಪಾಯಿಗಳು.
೨) ೧೯೮೭-೮೮ : ೨೬೨.೨೨ ಕೋಟಿ ರೂಪಾಯಿಗಳು.
೩) ೧೯೮೮-೮೯ : ೨೬೮.೯೪ ಕೋಟಿ ರೂಪಾಯಿಗಳು.

ಆ) ೧) ೧೯೮೬-೮೭ : ೨೫.೭೩ ಶೇ.
೨) ೧೯೮೭-೮೮ : ೯.೨೭ ಶೇ.
೩) ೧೯೮೮-೮೯ : ೨.೫೬ ಶೇ.

ಇ) ಹೌದು, ಅಲ್ಪಸ್ವಲ್ಪ ವ್ಯತ್ಯಾಸವಿದೆ.

ಶಿಕಾರಿಪುರ ತಾಲ್ಲೂಕಿನಲ್ಲಿ ಅಂಗನವಾಡಿ ಯೋಜನೆ ಬಗ್ಗೆ

೨೧೯. ಶ್ರೀ ಬಿ.ಎಸ್. ಯಡಿಯೂರಪ್ಪ(ಶಿಕಾರಿಪುರ).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಶಿವಮೊಗ್ಗ ಜಿಲ್ಲೆ ಶಿಕಾರಿಪುರ ತಾಲ್ಲೂಕಿಗೆ ಅಂಗನವಾಡಿ ಕಾರ್ಯಕ್ರಮದ ಅನ್ವಯ ಯೋಜನೆಯನ್ನು ಈ ವರ್ಷ ಪ್ರಾರಂಭ ಮಾಡುವ ಬಗ್ಗೆ ಸರ್ಕಾರ ಯೋಚನೆ ಮಾಡಿದೆಯೇ ?

ಆ) ಕಳೆದ ೬-೭ ವರ್ಷಗಳಿಂದಲೂ ಬೇಡಿಕೆ ಇದ್ದು ಈ ತಾಲ್ಲೂಕಿನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಹರಿಜನ-ಗಿರಿಜನರು ವಾಸವಾಗಿದ್ದರೂ ಈ ಯೋಜನೆಯನ್ನು ಅಳವಡಿಸದಿರಲು ಕಾರಣಗಳೇನು ?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಮಂತ್ರಿಗಳು).—

ಅ) ರಾಜ್ಯದ ಐಸಿಡಿಎಸ್ ಅನಾವೃತ ತಾಲ್ಲೂಕುಗಳ ಹಿನ್ನೆಲೆ ವಿವರಗಳೊಂದಿಗೆ ಶಿಕಾರಿಪುರ ತಾಲ್ಲೂಕನ್ನು ಸೇರಿಸಿ ಯೋಜನೆ ಮಂಜೂರಾತಿಗೆ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಲಾಗುವುದು.

ಆ) ಹಿಂದಿನ ವರ್ಷಗಳಲ್ಲಿ ಎಲ್ಲಾ ಅನಾವೃತ ತಾಲ್ಲೂಕುಗಳೊಂದಿಗೆ ಶಿಕಾರಿಪುರ ತಾಲ್ಲೂಕನ್ನು ಸೇರಿಸಿ ಯೋಜನೆ ಮಂಜೂರಾತಿಗೆ ಪ್ರಸ್ತಾವನೆಯನ್ನು ಕೇಂದ್ರಸರ್ಕಾರಕ್ಕೆ ಸಲ್ಲಿಸಲಾಗಿತ್ತು, ಆದರೆ ಕೇಂದ್ರ ಸರ್ಕಾರವು ಶಿಕಾರಿಪುರ ತಾಲ್ಲೂಕನ್ನು ಐಸಿಡಿಎಸ್ ಯೋಜನೆಗೆ ಇದುವರೆವಿಗೂ ಪರಿಗಣಿಸಿರುವುದಿಲ್ಲ.